| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 85/2018

ಪ್ರಾ.ಸಾ. 6 ಚಾ.ಸಾ. 8

| | | |
|---|---|---|
| ಹೆಸರು | : | ಬಸವರಾಜ |
| ತಂದೆಯ ಹೆಸರು | : | ಸಂಗಣ್ಣ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸ | : | ಯಾದಗಿರಿ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 20-09-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2017 ರಿಂದ 2021 ರವರೆಗ ಯಾದಗಿರಿ ಗ್ರಾಮಿಣ ಪೊಲಿಸ ಠಾಣೆಯಲ್ಲಿ ಮೂಖ್ಯ ಪೆದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೆನೆ.

2. ದಿಃ 08-01-2018 ರಂದು ಮಃ 2-15 ಕ್ಕೆ ಚಾಸಾಃ 1 ರವರು ಮುಮಾ ಜಪ್ತಿ ಪಂಚನಾಮೆಯನ್ನು ಹಾಜರುಪಡಿಸಿ ಅದರೊಂದಿಗೆ ಸರಕಾರಿ ತರ್ಫಿ ವರದಿಯನ್ನು ನೀಡಿದ್ದು . ಅದನ್ನು ಆಧರಿಸಿ ಗುನ್ನೆ ನಂಃ 11/2018 ದಾಖಲಿಸಿ ಕೊಂಡಿರಿತ್ತೆನೆ. ನಿಪಿ 2 ನ್ನು ತೊರಿಸಿ ತಮ್ಮ ಸಹಿ ಗುರುತಿಸಿದ್ದು ಅದನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಕಡತದಲ್ಲಿನ ಪ್ರಾ ವಾ ವ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು.

4. ಮುಮಾ 1 ನ್ನು ನೊಡಿ ಸಾಕ್ಷಿ ಗುರುತಿಸುತ್ತಾರೆ. ಅದೆ ದಿನ ಮಾನ್ಯ ನ್ಯಾಯಾಲಯಕ್ಕೆ ನಿಪಿ 4 ನ್ನು ಸಲ್ಲಿಸಿ ಮೆಲಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೆನೆ. ಅದೇ ದಿನ ಮುಮಾ 1 ನ್ನು ಠಾಣೆಯಲ್ಲಿ ತನಿಖೆ ಮುಗಿಯುವವರೆಗೆ ತಾಬಾಕ್ಕಾಗಿ ಮನವಿ ಮಾಡಿರುತ್ತೆನೆ . ಅದೆ ದಿನ ಚಾಸಾಃ 4 ರಿಂದ 7 ರ ಹೇಳಿಕೆ ಪಡೆದು ಕೊಂಡಿರುತ್ತೆನೆ. ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನಉನ ಚಾಸಾಃ 10 ರವಗಿಗೆ ವಹಿಸಿಕೊಡಲಾಯಿತು. ನನ್ನ ತನಿಖೆ ಕಾಲದಲ್ಲಿ ಚಾಸಾ6 ರವರು ನಿಪಿ 3 ರಂತೆ ಹೇಳಿಕೆ ನೀಡಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್ ಎಸ್ ಪಿ ವಕೀಲರಿಂದ</u>

5. ದಿಃ 08-01-2018 ರಂದು ನಮ್ಮ ಠಾಣೆಯಲ್ಲಿ ಚಾಸಾಃ 1 ರವರು ವರದಿ ನೀಡಿರುತ್ತಾರೆ. ವರದಿಯನ್ನು ಬೆರಳಚ್ಚು ಮಾಡಿಸಿ ನೀಡಿರುತ್ತಾರೆ. ಸದರಿ ವರದಿಯಲ್ಲಿ ದಿಃ 23-10-2016 ಎಂದು ನಮೂದಿರುತ್ತದೆಂದರೆ ಸರಿ. ಸದರಿ ದಿನಾಂಕ ನಮೂದು ಮಾಡಿರುವುದು ಕಣ್ಣು ತಪ್ಪಿ ನಿಂದ ಆಗಿರುವುದು. ಗುನ್ನೆ ಸಂಃ 11/2018 ನ್ನು ಮಾನ್ಯ ನ್ಯಾಯಾಲಯಕ್ಕೆ ಫ್ರಾ ವಾ ವ ವರದಿಯನ್ನು ಸಲಿಸಿದ ಪೊಲಿಸ ಪೆದೆಯ ವರದಿಯನ್ನು ನಾನು ಈ ಪ್ರಕಣದಲ್ಲಿ ಪಡೆದಿಲ್ಲ. ನಾನು ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ವಸ್ತು ಗಳು ಇನ್ ವೆಂಟರಿ ನ್ಯಾಯಾಧಿಶರ ಮುಂದೆ ಮಾಡಿಲ್ಲ. ನಾನು ಚಾಸಾಃ 1 , ಚಾಸಾಃ4 ರಿಂದ 7 ರವರ ಕರ್ತವ್ಯ ಹಾಜರಾತಿ ದಾಖಲೆಗಳನ್ನು ಪಡೆದಿಲ್ಲ. ಆರೋಪಿತನ ಅಕ್ಕ ಪಕ್ಕ ಹೊಲದ ಜನರ ಬಳಿ ಯಾವುದೆ ವಿಚಾರಣೆ ನಾನು ಮಾಡಿಲ್ಲ. ಆರೋಪಿತನ ಮನೆಯ ಆಜು ಬಾಜು ಜನರ ಯಾವುದೆ ವಿಚಾರಣೆ ಮಾಡಿಲ್ಲ. ಹಳ್ಳಿಗಳಲ್ಲಿ ದಳಪತಿ ಇರುವುದು ನನಗೆ ಗೊತ್ತಿಲ್ಲ.

6. ದಿಃ 08-01-2018 ರಂದು ಮಃ 2-15 ಕ್ಕೆ ಚಾಸಾಃ 1 ರವರು ಮುಮಾ ಜಪ್ತಿ ಪಂಚನಾಮೆಯನ್ನು ಹಾಜರುಪಡಿಸಿ ಅದರೊಂದಿಗೆ ಸರಕಾರಿ ತರ್ಫೆ ವರದಿಯನ್ನು ನೀಡಿದ್ದು ಅದನ್ನು ಆಧರಿಸಿ ಗುನ್ನೆ ನಂಃ 11/2018 ದಾಖಲಿಸಿ ಕೊಂಡಿರಿತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಅದೆ ದಿನ ಮಾನ್ಯ ನ್ಯಾಯಾಲಯಕ್ಕೆ ನಿಪಿ 4 ನ್ನು ಸಲ್ಲಿಸಿ ಮೆಲಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಮುಮಾ 1 ನ್ನು ಠಾಣೆಯಲ್ಲಿ ತನಿಖೆ ಮುಗಿಯುವವರೆಗೆ ತಾಬಾಕ್ಕಾಗಿ ಮನವಿ ಮಾಡಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ದಿನ ಚಾಸಾಃ 4 ರಿಂದ 7 ರ ಹೇಳಿಕೆ ಪಡೆದು ಕೊಂಡಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ನನ್ನ ಮೆಲಾಧಿಕಾರಿ ಎಂಬ ಕಾರಣಕ್ಕೆ ಅವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತೆನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.